9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಭವಿಷ್ಯದ ಮುನ್ನುಡಿ
ಸಂಪಾದಕ: ಕೆ.ಎನ್.ರವಿ
info.varthaman@gmail.com
VARTHAMAN
Volume: 69
Issue: 301
Pages: 06

KA/SK/MYS/1098/2023-2025
R.N.I. No.3577/1957
www.varthaman.in
Price-3




# ಜಂಬೂಸವಾರಿಗೆ ಜನಸಾಗರ

## ದಸರಾದಲ್ಲಿ ಮೊದಲ ಬಾರಿಗೆ ಚಿನ್ನದ ಅಂಬಾರಿ ಹೊತ್ತು ನಡೆದ ಪ್ರಶಾಂತ ಆನೆ

**ಮೈಸೂರು:** ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವ ಲಕ್ಷಾಂತರ ಜನರ ನಡುವೆ ವಿಜೃಂಭಣೆಯಿಂದ ಬುಧವಾರ ನಡೆಯಿತು. ಲಕ್ಷಾಂತರ ಜನರು ಚಿನ್ನದ ಅಂಬಾರಿಯಲ್ಲಿ ವಿರಾಜಮಾನಳಾದ ಶ್ರೀ ಚಾಮುಂಡೇಶ್ವರಿಯನ್ನು ಕಣ್ತುಂಬಿಕೊಂಡರು.

ಮೈಸೂರು ದಸರಾದ ಅಂತಿಮ ಘಟ್ಟವಾದ ಐತಿಹಾಸಿಕ ಜಂಬೂಸವಾರಿಗೆ ಬುಧವಾರ ಸಂಜೆ 4.10ರಿಂದ 4.35ರ ವರೆಗಿನ ಶುಭ ಮೀನಾ ಲಗ್ನದಲ್ಲಿ ಅಂಬಾರಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಚಾಲನೆ ನೀಡಲಾಯಿತು.

ಮೈಸೂರು ಅರಮನೆ ಅಂಗಳದಲ್ಲಿ ತಾಯಿ ಚಾಮುಂಡೇಶ್ವರಿ ವಿರಾಜಮಾನವಾಗಿರುವ 750 ಕೆಜಿ ತೂಕದ ಚಿನ್ನದ ಅಂಬಾರಿಗೆ ಸಿಎಂ ಚಾಲನೆ ನೀಡಿದರು. ರಾಜವಂಶಸ್ಥ, ಸಂಸದ ಯದುವೀರ್ ಒಡೆಯರ್, ಸಚಿವ ಶಿವರಾಜ್ ತಂಗಡಗಿ, ಕೇರಳ ಸಿಎಂ ಸತೀಶನ್, ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಹಾಗೂ ಜಿಲ್ಲಾಧಿಕಾರಿ ಪಾಲ್ಗೊಂಡಿದ್ದರು.

ಐತಿಹಾಸಿಕ ಜಂಬೂಸವಾರಿಯಲ್ಲಿ ಮೊದಲ ಬಾರಿಗೆ ಆನೆ ಪ್ರಶಾಂತ ಚಿನ್ನದ ಅಂಬಾರಿ ಹೊತ್ತು ನಡೆಯುವ ಮೂಲಕ ಮುಂದಿನ ಗಜಪಡೆ ಕ್ಯಾಪ್ಟನ್ ಆಗುವ ಅರ್ಹತೆಯನ್ನು ಪಡೆದಿದ್ದಾನೆ. ಜಂಬೂಸವಾರಿಯ ಉದ್ದಕ್ಕೂ ಹೆದರದೆ, ಬೆದರದೆ ಹೆಜ್ಜೆ ಹಾಕಿದ.

ನಾಡದೇವತೆ ಚಾಮುಂಡಿ ತಾಯಿ ವಿರಾಜಮಾನವಾಗಿರುವ 750 ಕೆಜಿಯ ಚಿನ್ನದ ಅಂಬಾರಿ ಹೊತ್ತ ಕ್ಯಾಪ್ಟನ್ ಪ್ರಶಾಂತ ಆನೆ ಜಂಬೂಸವಾರಿ ಮೆರವಣಿಗೆಯಲ್ಲಿ ರಾಜಗಾಂಭೀರ್ಯದಿಂದ ಹೆಜ್ಜೆ ಹಾಕುತ್ತಾ ಸಾಗಿತು. ನಿಶಾನೆ, ಕುಮ್ಕಿ ಆನೆಗಳು ಪ್ರಶಾಂತನಿಗೆ ಸಾಥ್ ನೀಡಿದವು.

ನಿಶಾನೆ ಆನೆ ಅಭಿಮನ್ಯು,

ಪುಟ 2ಕ್ಕೆ

### ಅಭಿಮನ್ಯುವಿಗೆ ಜನಮನ್ನಣೆ

ಅಭಿಮಾನಿಗಳ ಒತ್ತಾಸೆಯ ಮೇರೆಗೆ ನಿಶಾನೆ ಆನೆಯಾಗಿ ಅಭಿಮನ್ಯು ಆನೆ ಭಾಗವಹಿಸಿತ್ತು. ಮೆರವಣಿಗೆಯಲ್ಲಿ ಜನರ ಗಮನ ಸೆಳೆಯಿತು. ಕಾವಾಡಿಯಿಂದ ಮಾವುತನಾಗಿರುವ ರಾಜು ಅಭಿಮನ್ಯು ಆನೆಯನ್ನು ಮುನ್ನಡೆಸಿದರು. ನೌಪತ್ ಆನೆಯಾಗಿ ಗೋಪಿ ಕಂಡು ಬಂದಿತು. ಅಂಬಾರಿ ಹೊತ್ತ ಪ್ರಶಾಂತ ಆನೆಗೆ ಕಾವೇರಿ, ರೂಪ ಆನೆಗಳು ಪಕ್ಕದಲ್ಲೇ ಬೆಂಬಲವಾಗಿದ್ದವು.

### ಬೆಟ್ಟದಿಂದ ಆಗಮಿಸಿದ ಚಾಮುಂಡೇಶ್ವರಿ ದೇವಿ

**ಮೈಸೂರು:** ವಿಜಯದಶಮಿ ಜಂಬೂಸವಾರಿ ಮೆರವಣಿಗೆಗೆ ಚಾಮುಂಡಿಬೆಟ್ಟದಿಂದ ಚಾಮುಂಡೇಶ್ವರಿ ಉತ್ಸವಮೂರ್ತಿಯನ್ನು ತೆರೆದ ವಾಹನದಲ್ಲಿ ಮೆರವಣಿಗೆಯಲ್ಲಿ ಅರಮನೆಗೆ ತರಲಾಯಿತು. ಮಾರ್ಗದುದ್ದಕ್ಕೂ ರಸ್ತೆ ಬದಿಯಲ್ಲಿ ನಿಂತಿದ್ದ ಜನರು ಮೂರ್ತಿಯನ್ನು ಕಣ್ತುಂಬಿಕೊಂಡು ಧನ್ಯತೆ ಭಾವ ತಳೆದರು.

ವಿಶೇಷ ಅಲಂಕಾರ

ಪುಟ 2ಕ್ಕೆ





### ನಂದಿಧ್ವಜಕ್ಕೆ ಸಿಎಂ ಪೂಜೆ

**ಮೈಸೂರು:** ಮೈಸೂರು ಅರಮನೆ ಮುಂಭಾಗ ಬುಧವಾರ ಮಧ್ಯಾಹ್ನ 1.36ಕ್ಕೆ ನಂದಿಧ್ವಜಕ್ಕೆ ಪೂಜೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ಅವರು ವಿಶ್ವವಿಖ್ಯಾತ ಮೈಸೂರು ದಸರಾಗೆ ಚಾಲನೆ ನೀಡಿದರು.

ಮೈಸೂರು ಪೇಟ ಧರಿಸಿ ಗಮನ ಸೆಳೆದ ಸಿಎಂ ಡಿ.ಕೆ ಶಿವಕುಮಾರ್, ತಮಗಾಗಿ ತಂದಿದ್ದ ಹೂವಿನ

ಪುಟ 2ಕ್ಕೆ

## ಶಿವಮೊಗ್ಗದಲ್ಲಿ ದಿಕ್ಕೆಟ್ಟು ಓಡಿದ ಆನೆ: ಕೆಳಗೆಬಿದ್ದ ಬೆಳ್ಳಿ ಅಂಬಾರಿ



**ಶಿವಮೊಗ್ಗ:** ಶಿವಮೊಗ್ಗ ದಸರಾ ಜಂಬೂಸವಾರಿ ವೇಳೆ 450 ಕೆಜಿ ಬೆಳ್ಳಿ ಅಂಬಾರಿಯನ್ನು ಹೊತ್ತಿದ್ದ ಆನೆ ಸೋಮಣ್ಣ ಬೆದರಿ ದಿಕ್ಕಾಪಾಲಾಗಿ ಓಡಾಡಿದೆ. ಇದರಿಂದ ಹೆದರಿದ ಜನರು ದಿಕ್ಕಾಪಾಲಾಗಿ ಓಡಿದ್ದಾರೆ.

ಶಿವಮೊಗ್ಗದ ಶಿವಪ್ಪನಾಯಕ ಅರಮನೆಯಿಂದ ಜಂಬೂಸವಾರಿ ಆರಂಭವಾಗಿತ್ತು. ಸ್ವಲ್ಪ ದೂರ ಹೋಗುತ್ತಿದ್ದಂತೆ

ಪುಟ 2ಕ್ಕೆ

## ಸುತ್ತೂರು ಮಠಕ್ಕೆ ರಾಜ್ಯಪಾಲರ ಭೇಟಿ

**ಮೈಸೂರು:** ಡಾ.ಸುಧಾ ಯಾದವ್ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡ ಬಳಿಕ ಮೊದಲ ಬಾರಿಗೆ ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿ, ವಿಶೇಷ ಪೂಜೆ ಸಲ್ಲಿಸಿದರು. ಮೈಸೂರಿನ ಆರಾಧ್ಯ ದೇವತೆ, ಶಕ್ತಿ ಸ್ವರೂಪಿಣಿ ತಾಯಿ ಸನ್ನಿಧಿಯಲ್ಲಿ ರಾಜ್ಯದ ಜನರ ಸೇವೆಯ ಪವಿತ್ರ ಹೊಣೆಗಾರಿಕೆಯನ್ನು ಸಮರ್ಪಣಾಭಾವದಿಂದ





## ಗಜಪಡೆ ಮೈತುಂಬಾ ಸಿಂಗಾರ

**ಮೈಸೂರು:** ಅಂಬಾರಿ ಆನೆ ಪ್ರಶಾಂತ ನೇತೃತ್ವದ 13 ಆನೆಗಳು ಕಲಾವಿದರ ಕುಂಚಕ್ಕೆ ತಮ್ಮ ಮೈಯನ್ನು ಒಡ್ಡಿ ಕಂಗೊಳಿಸಿದವು. ಮಾವುತರು ಹಾಗೂ ಕಾವಾಡಿಗರು ಮಂಗಳವಾರ ರಾತ್ರಿ 11ರಿಂದಲೇ ಆನೆಗಳಿಗೆ ಸ್ನಾನ ಮಾಡಿಸಿ, ಹುಣಸೂರಿನ ನಾಗಲಿಂಗಪ್ಪ ಬಡಿಗೇರ್ ನೇತೃತ್ವದ ಕಲಾವಿದರ ಬಳಿ ಸರದಿಯಲ್ಲಿ ಕರೆತಂದರು. ಲಕ್ಷ್ಮಿ ಆನೆಯಿಂದ ಆರಂಭವಾದ ಚಿತ್ತಾರ ಬಿಡಿಸುವ ಕಾರ್ಯ ಬುಧವಾರ ಮಧ್ಯಾಹ್ನ 1.30ಕ್ಕೆ ಪ್ರಶಾಂತನಿಗೆ ಸಿಂಗಾರ ಮಾಡುವ ಮೂಲಕ ಪೂರ್ಣಗೊಂಡಿತು.

ಅರಮನೆ ಪಟ್ಟದಾನೆ ಶ್ರೀಕಂಠ ಹಾಗೂ ನಿಶಾನೆ ಆನೆ ಏಕಲವ್ಯ ಅವರನ್ನು ಬೆಳಿಗ್ಗೆಯೇ ಸಿದ್ಧಗೊಳಿಸಿ ಅರಮನೆ ಪೂಜಾ ಕಾರ್ಯಕ್ರಮಗಳಿಗೆ ಕಳುಹಿಸಿದರು. ಬಳಿಕ ಉಳಿದ ಆನೆಗಳನ್ನು ಸಿದ್ಧಗೊಳಿಸಿದರು.

ಬಿಳಿ, ಹಸಿರು, ಕಪ್ಪು, ನಸುಗೆಂಪು, ಹಳದಿ ನೈಸರ್ಗಿಕ ಬಣ್ಣಗಳಿಂದ ಲೇಪನವನ್ನು ಕಲಾವಿದರು ಮಾಡಿದರು. ಎಲ್ಲಾ ಆನೆಗಳ ಉಗುರಿಗೆ ಬಂಗಾರದ ಲೇಪನ ಮಾಡಲಾಗಿತ್ತು. ಬಣ್ಣದಾಲಂಕಾರವನ್ನು ಆನೆಗಳು ತಾಳ್ಮೆಯಿಂದ ಬರೆಸಿಕೊಂಡವು.

ಆನೆಗಳ ಸೊಂಡಿಲಿಗೆ ರಾಜಲಾಂಛನವಾದ ಗಂಡಬೇರುಂಢ, ಕಾಲು, ಮೊರದಗಲದ ಕಿವಿಗಳ ಮೇಲೆ ಶಂಖ, ಚಕ್ರ, ದಂತದ ದವಡೆಯ ಮೇಲೆ ಹಾರುವ ಗಿಳಿ, ಎಲೆ, ಕೆನ್ನೆಯ ಮೇಲೆ ಹೂವು, ಬಳ್ಳಿ ಬಿಡಿಸಲಾಗಿತ್ತು. ಕಾಲುಗಳಿಗೆ ಬಳ್ಳಿ, ಪಕ್ಷಿ, ಎಲೆ, ಹೂವು, ಆನೆಗಳ ಬಾಲದ ಗಾತ್ರದ ತಕ್ಕಂತೆ ಹೂಬಳ್ಳಿ ಚಿತ್ರ ಬಿಡಿಸಲಾಗಿತ್ತು.

## ಜಟ್ಟಿಗಳಿಗೆ ಪೊಲೀಸರ ಅಡ್ಡಿ: ರದ್ದಾದ ವಜ್ರಮುಷ್ಠಿ ಕಾಳಗ

**ಮೈಸೂರು:** ವಿಶ್ವವಿಖ್ಯಾತ ಮೈಸೂರು ದಸರಾದಲ್ಲಿ ಜಂಬೂಸವಾರಿಗೂ ಮುನ್ನ ಪರಂಪರೆಯಿಂದ ನೂರಾರು ವರ್ಷಗಳಿಂದ ನಡೆಯುತ್ತಿದ್ದ ವಜ್ರಮುಷ್ಠಿ ಕಾಳಗ ಈ ವರ್ಷ ಪೊಲೀಸರ ಕಾಟದಿಂದ ರದ್ದಾಗಿದೆ.

ಮೈಸೂರು ದಸರಾ ಇತಿಹಾಸದಲ್ಲಿ ಮೊದಲ ಬಾರಿಗೆ ವಜ್ರಮುಷ್ಠಿ ಕಾಳಗ ರದ್ದಾಗಿದೆ. ಜಟ್ಟಿಗಳನ್ನು ಅರಮನೆ ಒಳಬಿಡಲು ಪೊಲೀಸರು ನಿರಾಕರಿಸಿದ್ದರಿಂದ ಇದು ಜರುಗಿದೆ. ಈ ಸಂದರ್ಭ ಜಟ್ಟಿಗಳು ಮತ್ತು ಪೊಲೀಸ್ ಅಧಿಕಾರಿಗಳ ನಡುವೆ ಜಟಾಪಟಿ ನಡೆದಿದೆ.

ಮೈಸೂರಿನ ಮಹೇಶ್ ಜಟ್ಟಿ, ಬೆಂಗಳೂರಿನ ಚೇತನ್ ಜಟ್ಟಿ, ಚಾಮರಾಜನಗರದ ಸತೀಶ್ ಜಟ್ಟಿ ಹಾಗೂ ಚನ್ನಪಟ್ಟಣದ ತೇಜಸ್ ನಾಲ್ಕು ಜಟ್ಟಿಗಳು ರಾಜವಂಶಸ್ಥರಾದ ಯದುವೀರ್ ಸಮ್ಮುಖದಲ್ಲಿ ಕಾಳಗ ನಡೆಸಲು



ಪುಟ 2ಕ್ಕೆ

## ಮೈನವಿರೇಳಿಸಿದ ಪಂಜಿನ ಕವಾಯತು

### ನಾಡಹಬ್ಬ ದಸರಾಗೆ ಸಂಭ್ರಮದ ತೆರೆ: ಕಿಕ್ಕಿರಿದು ಸೇರಿದ್ದ ಜನಸಮೂಹ

**ಮೈಸೂರು:** ನಗರದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದಲ್ಲಿ ಬುಧವಾರ ರಾತ್ರಿ ನಡೆದ ದಸರಾ ಪಂಜಿನ ಕವಾಯಿತು ನೆರೆದಿದ್ದ ಜನರನ್ನು ರೋಮಾಂಚನಗೊಳಿಸಿತು. ಪಂಜಿನ ಕವಾಯಿತು ಮೂಲಕ ನಾಡಹಬ್ಬ ಮೈಸೂರು ದಸರಾ ತೆರೆಕಂಡಿತು.

ಪಂಜಿನ ಕವಾಯಿತು ಬುಧವಾರ ರಾತ್ರಿ 7.30ಕ್ಕೆ ವಂದೇ ಮಾತರಂ ಗೀತೆಯೊಂದಿಗೆ ಆರಂಭಗೊಂಡಿತು. ಬೆಂಗಳೂರು ನಗರ ದಕ್ಷಿಣ ಸಹಾಯಕ ಪೊಲೀಸ್ ಆಯುಕ್ತ ಪ್ರದಾನ ದಳಪತಿ ಪೊಲೀಸ್ ಕೆ.ಎನ್.ಸುರೇಶ್ ನೇತೃತ್ವದಲ್ಲಿ ತುಕಡಿಗಳಾದ ಶರಣಪ್ಪ ಡಿ.ಶಾಸನ, ಅಶ್ವರೋಹಿದಳ ರಾಜ್ಯಪಾಲರಿಗೆ ಗೌರವ ವಂದನೆ ಸಲ್ಲಿಸಿದರು.

ಮೂರು ಸುತ್ತಿನಲ್ಲಿ ಏಳು ಬಾರಿ ಕುಶಾಲ ತೋಪು ಸಿಡಿಸಿದ ವೇಳೆ ರಾಷ್ಟ್ರಗೀತೆಗೆ ಗೌರವ ವಂದನೆ ಸಲ್ಲಿಸಿದರು. ಭಜರಂಗಿ ಮೋಹನ್ ಅವರ ತಂಡದಿಂದ 160 ಮಂದಿಯ ನೃತ್ಯ ತಂಡ, 450 ನೃತ್ಯ ಕಲಾವಿದರು ಒಟ್ಟಾರೆಯಾಗಿ ಕಲರ್ಸ್

ಪುಟ 2ಕ್ಕೆ

### ಪಂಜಿನ ವಿವಿಧ ಆಕೃತಿ

ಪೊಲೀಸ್ ಇಲಾಖೆಯ 300 ಪೊಲೀಸರು, 600 ಪಂಜುಗಳನ್ನು ಹಿಡಿದು ಮನಮೋಹಕ ದೃಶ್ಯಗಳು, ಅಕ್ಷರಾಕೃತಿಗಳನ್ನು ರಚಿಸಿದರು. ಪೊಲೀಸ್ ಬ್ಯಾಂಡ್ ಹಿಮ್ಮೇಳದಲ್ಲಿ ವಿವಿಧ ದೈಹಿಕ ಕಸರತ್ತುಗಳನ್ನು ಮಾಡುತ್ತಾ ವಿವಿಧ

ಪುಟ 2ಕ್ಕೆ

## ಪೊಲೀಸರ ದೌರ್ಜನ್ಯ: ಪತ್ರಕರ್ತರ ಪ್ರತಿಭಟನೆ

**ಮೈಸೂರು:** ದಸರಾ ಜಂಬೂಸವಾರಿಗೆ ವಾರ್ತಾ ಮತ್ತು ಪ್ರಚಾರ ಇಲಾಖೆ ವಾಹನದಲ್ಲಿ ತೆರಳುತ್ತಿದ್ದ ಪತ್ರಕರ್ತರ ಮೇಲೆ ಪೊಲೀಸರು ದೌರ್ಜನ್ಯ ನಡೆಸಿದ್ದಾರೆ. ಪತ್ರಕರ್ತರನ್ನು ಬ್ರಹ್ಮಪುರಿ ಮುಖ್ಯ ದ್ವಾರದಲ್ಲಿ ಪೊಲೀಸರು ತಡೆದರು. ವಾಹನದಿಂದ ಕೆಳಗಿಳಿಸಿ ಒಳಗೆ ಬಿಡದೆ ಎಳೆದಾಡಿದರು.

ಆದರೆ ಒಳಗೆ ಹೋದ ಆನಂತರವೂ ಪತ್ರಕರ್ತರನ್ನು ಮೂರು ಕಡೆ ಪೊಲೀಸರು ತಡೆದು ನಿಲ್ಲಿಸಿ ದೌರ್ಜನ್ಯ ಮೆರೆದಿದ್ದಾರೆ. ಇದರಿಂದ ಸುಮಾರು ಒಂದು ಗಂಟೆ ತಡವಾಗಿ ಪತ್ರಕರ್ತರು ಅರಮನೆ ಒಳಗೆ ತೆರಳುವಂತಾಯಿತು.

ಪುಟ 2ಕ್ಕೆ





